BNK-33-III

Sl.No. : **Total No. of Pages : 3**

ತೃತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ – 2025
(SLM Scheme)
ಐಚ್ಛಿಕ ಕನ್ನಡ (ಪತ್ರಿಕೆ – ೩)
ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು
(ವಡ್ಡಾರಾಧನೆ, ರನ್ನನ ಗದಾಯುದ್ಧ ಸಂಗ್ರಹ)

ಸಮಯ: 3 ಗಂಟೆಗಳು **ಗರಿಷ್ಠ ಅಂಕಗಳು : 80**

ಸೂಚನೆ : ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.

ವಿಭಾಗ–ಎ

(ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು : 20 ಅಂಕಗಳು)

ಪ್ರ1) ಎರಡು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಹೆಸರಿಸಿ: **[2×5=10]**

೧) ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದುಕಾ

೨) ನಿಂದಲ್ಲಿ ನಿಂದಪೆಂ ನಡೆದಲ್ಲಿ ನಡೆದಪೆಂ
ಬಂದಲ್ಲಿ ಬಂದಪೆಂ ನುಡಿದಲ್ಲಿ ನಡೆದಪೆಂ

೩) ಈಶನ ಕರುಣೆಯ
ನಾಶಿಸು ವಿನಯದಿ
ದಾಸನ ಹಾಗೆಯೇ ನೀಮನವೇ

೪) ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು

ಪ್ರ2) ಒಂದರ ಭಾವಸ್ವಾರಸ್ಯವನ್ನು ಬರೆಯಿರಿ: **[1×4=4]**

೧) ಸ್ವಾಮಿ ಕಾರ್ತ್ತಿಕಋಷಿಯುಂ ಕ್ಷಮೆಯಂ ಭಾವಿಸಿ ನೆತ್ತರೊಕ್ಕು ಬಸವಟೆದು ಬೇಸಗೆಯ
ಕಡುವಿಸಿಲಿಂದಂ ಝಳದಿಂದಂ ಬೆಂಕಿಯಿಂದ ನೀಟ್ಗೆಯಧಿಕಮಾಗಿ ತಣ್ಪಿಮೊಳ್ಳೊಳ್ಳಿತ್ತು
ಸಮಾಧಿಯಕ್ಕುವೆಂದು ಮನದೊಳ್ ಬಗೆದಿರ್ದೊನನ್ನೆಗಂ ತಮ್ಮಜ್ಜಿಯಪ್ಪ ವೀರಮತಿ ಮಹಾದೇವಿ
ಬ್ರಹ್ಮಚರ್ಯವ್ರತಮಂ ಕೊಂಡು ಕಾಲಂ ಗೆಯ್ದು ವ್ಯಂತರದೇವತೆಯಾಗಿ ಪುಟ್ಟಿದಾ...

೨) ಆ ರವಮಂ ನಿರ್ಜಿತಕಂ
ಠೀರವರವಮಂ ನಿರಸ್ತಘನರವಮಂ ಕೋ
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ

ಪ್ರ3) ನಾಲ್ಕು ಪದಗಳಿಗೆ ಅರ್ಥ ಬರೆಯಿರಿ: **[4×½=2]**

ಬಾಚಿಸು, ನೋಟಿ, ಭೈಕ್ಷ, ಬಚ್ಚ, ಕಾಳಹಸ್ತ, ಊರುಗಳು, ಊರಿ, ಸೀಸಕ.

ಪ್ರ4) ಎರಡನ್ನು ಸಂದರ್ಭ ಸಹಿತ ಬರೆಯಿರಿ: **[2×2=4]**

೧) ಅಗ್ಗಳವಸ್ತುವೆಲ್ಲಂ ಪೃಥ್ವಿಯನಾಳ್ವೊಂಗಕ್ಕುಂ.

೨) ಯಮದಂಡಂಗೇನುಂ ಪೊಲ್ಲಮೆಯುಂ ದೋಷಮುಮಿಲ್ಲ.

೩) ಪೊಣ್ದಪ್ರತಿಜ್ಞೆಯಂ ನೆನೆವೆಯೆಯೋ.

೪) ಸತ್ತ ಮಗಂದಿರ್ ಸತ್ತರ್.

ವಿಭಾಗ–ಬಿ

(ಛಂದಸ್ಸು : 30 ಅಂಕಗಳು)

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ಛಂದಸ್ಸಿನ ಉಗಮ, ನಿಷ್ಪತ್ತಿ ಮತ್ತು ಪ್ರಯೋಜನಗಳೇನು? ವಿಶದಪಡಿಸಿ.

೨) ಕಂದ ಪದ್ಯದ ಸ್ವರೂಪ, ಇತಿಹಾಸ ಮತ್ತು ವೈಶಿಷ್ಟ್ಯವನ್ನು ತಿಳಿಸಿ.

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ಯತಿ ಎಂದರೇನು? ಯತಿ ಕುರಿತು ಛಂದಃಶಾಸ್ತ್ರಜ್ಞರ ಅಭಿಪ್ರಾಯಗಳನ್ನು ವಿವೇಚಿಸಿ.

೨) ಹೊಸಗನ್ನಡ ಛಂದಸ್ಸಿಗೆ ತೀ.ನಂ.ಶ್ರೀ ಅವರ ಕೊಡುಗೆಯನ್ನು ಪರಿಚಯಿಸಿ.

ಪ್ರ7) ಎರಡಕ್ಕೆ ಟಿಪ್ಪಣಿ ಬರೆಯಿರಿ: **[2×5=10]**

೧) ಪ್ರಾಸ

೨) ತ್ರಿಪದಿ

೩) ಚಂಪಕ ಮಾಲೆ

೪) ಭಾಮಿನೀ ಷಟ್ಪದಿ

ವಿಭಾಗ–ಸಿ

(ಹಳಗನ್ನಡ ಪಠ್ಯಗಳು : ವಡ್ಡಾರಾಧನೆ ಮತ್ತು ಗದಾಯುದ್ಧ ಸಂಗ್ರಹ : 30 ಅಂಕಗಳು)

ಪ್ರ8) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ವಿದ್ಯುಚ್ಚೋರ ಮತ್ತು ಯಮದಂಡನ ಪಾತ್ರವನ್ನು ಪರಿಚಯಿಸಿ.

೨) ಅಗ್ನಿರಾಜನು ತನ್ನ ಮಗಳನ್ನೇ ವಿವಾಹವಾದುದರ ಪರಿಣಾಮವೇನಾಯಿತು? ಚರ್ಚಿಸಿ.

ಪ್ರ9) ಒಂದಕ್ಕೆ ಟಿಪ್ಪಣಿ ಬರೆಯಿರಿ: **[1×5=5]**

೧) ವಡ್ಡಾರಾಧನೆ ಕೃತಿಯ ಧಾರ್ಮಿಕ ಮಹತ್ವ

೨) ವಡ್ಡಾರಾಧನೆ ಕೃತಿಕಾರರ ಪರಿಚಯ

ಪ್ರ10)ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ಭೀಮ–ದುರ್ಯೋಧನರ ನಡುವೆ ನಡೆದ ಗದಾಯುದ್ಧ ಪ್ರಸಂಗವನ್ನು ನಿರೂಪಿಸಿ.

೨) 'ಭೀಮಸೇನನ ಪ್ರತಿಜ್ಞೆಗೆ ದ್ರೌಪದಿಯೇ ಕಾರಣ' ಈ ಮಾತನ್ನು ಸಮರ್ಥಿಸಿ.

ಪ್ರ11)ಒಂದಕ್ಕೆ ಟಿಪ್ಪಣಿ ಬರೆಯಿರಿ: **[1×5=5]**

೧) ಗಾಂಧಾರಿ

೨) ದ್ರೋಣಾಚಾರ್ಯ

☼ ☼ ☼